ಟೊಪ್ಪಿ ಮಾರುವವ ಮತ್ತು ಕೋತಿಗಳು



✍️ಶ್ರೀವಲ್ಲಿ ರೈ ಮಾರ್ಟೆಲ್

ಒಬ್ಬ ಊರೂರು ತಿರುಗಿ ಟೊಪ್ಪಿ ಮಾರುತ್ತಾ, ನಾಲ್ಕು ಕಾಸು ಸಂಪಾದನೆ ಮಾಡುತ್ತಿದ್ದ. ಒಂದು ದಿನ ಧಗಧಗಿಸುವ ಬೇಸಿಗೆಯ ಬಿಸಿಲಿನಲ್ಲಿ ನಡೆದು ನಡೆದು ಸುಸ್ತಾಗಿ, ಒಂದು ದೊಡ್ಡ ಆಲದ ಮರದ ಕೆಳಗೆ ಸ್ವಲ್ಪ ವಿಶ್ರಾಂತಿ ಪಡೆಯಲು ಮಲಗಿದ. ಅಷ್ಟರಲ್ಲೇ ಅವನಿಗೆ ಗಾಢ ನಿದ್ರೆ ಆವರಿಸಿತು.
ಎದ್ದು ನೋಡಿದಾಗ ಏನನ್ನಿಸಿತು ಎಂದರೆ, ದೊಡ್ಡ ಬುಟ್ಟಿಯಲ್ಲಿ ಗಂಟು ಕಟ್ಟಿಟ್ಟಿದ್ದ ಟೊಪ್ಪಿಗಳಲ್ಲಿ ಒಂದೂ ಕಾಣಿಸುತ್ತಿರಲಿಲ್ಲ. "ಅಯ್ಯೋ ಕಥೆಯೇ! ಕಳ್ಳರು ಯಾರಾದರೂ ಕದ್ದುಕೊಂಡು ಹೋಗಿದ್ದರೆ, ಗಂಟು ಬಿಚ್ಚಿ ಬುಟ್ಟಿಯನ್ನು ಇಲ್ಲೇ ಬಿಟ್ಟು ಹೋಗುತ್ತಾರೆಯೇ?" ಎಂದು ಯೋಚಿಸುತ್ತಾ ಸುತ್ತಲೂ ನಾಲ್ಕು ಬಾರಿ ತಿರುಗಿ ನೋಡಿದ. ಏನೂ ಕಾಣಿಸಲಿಲ್ಲ. "ಹಾಗಾದರೆ ಎಲ್ಲಿ ಹೋಯಿತು, ಆಕಾಶಕ್ಕೆ ಹಾರಿ ಹೋಯಿತೇ?" ಎಂದು ಮೇಲಕ್ಕೆ ಕಣ್ಣೆತ್ತಿ ನೋಡಿದಾಗ ಕಂಡ ದೃಶ್ಯವೇ ಬೇರೆ! ಮರ ತುಂಬ ಕೋತಿಗಳು! ಎಲ್ಲದರ ತಲೆಯ ಮೇಲೂ ಟೊಪ್ಪಿಗಳು!
ಇವನು ಅವುಗಳ ಬಳಿ ಕೈ ಮುಗಿದು ಬೇಡಿಕೊಂಡ, "ದಯವಿಟ್ಟು ನನ್ನ ಟೊಪ್ಪಿಗಳನ್ನು ಕೊಟ್ಟುಬಿಡಿ" ಎಂದು. ಕೋತಿಗಳೂ ಇವನಿಗೆ ಕೈ ಮುಗಿದವು. ಹೆದರಿಸಲು ಇವನು ಕಲ್ಲು ಎಸೆದರೆ, ಅವುಗಳೂ ಮರದ ರೆಂಬೆಗಳನ್ನು ಮುರಿದು ಎಸೆದವು. ಸಿಟ್ಟಿನಿಂದ ಕೋತಿಗಳಿಗೆ ಶಾಪ ಹಾಕುತ್ತಾ ಇವನು ಕುಣಿದಾಡಿದರೆ, ಕೋತಿಗಳೂ ಒಂದು ಕೊಂಬೆಯಿಂದ ಇನ್ನೊಂದು ಕೊಂಬೆಗೆ ಜಿಗಿಯುತ್ತಾ 'ಉಯೀ ಟುರ್ರ್' ಎನ್ನುತ್ತಾ ಗೇಲಿ ಮಾಡಿದವು.

ಕೊನೆಗೆ ಬೇಸತ್ತು, ಇವನು ತನ್ನ ತಲೆಯಲ್ಲಿದ್ದ ಟೊಪ್ಪಿಯನ್ನು ತೆಗೆದು ನೆಲಕ್ಕೆ ಬಡಿದನು. (ಊರಿನವರ ತಲೆಗೆಲ್ಲಾ ಟೊಪ್ಪಿ ಇಡುವ ಅವನ ತಲೆಯ ಮೇಲೂ ಒಂದು ಟೊಪ್ಪಿ ಇತ್ತಲ್ಲವೇ!). ಅಷ್ಟೇ, ಟೊಪ್ಪಿಗಳ ಮಳೆಯೇ ಆಯಿತು! ಎಲ್ಲಾ ಕೋತಿಗಳೂ ತಮ್ಮ ತಲೆಯಲ್ಲಿದ್ದ ಟೊಪ್ಪಿಗಳನ್ನು ಎಳೆದು ಎಳೆದು ಕೆಳಗೆ ಎಸೆದವು. ಟೊಪ್ಪಿ ಮಾರುವವನು ಎಲ್ಲಾ ಟೊಪ್ಪಿಗಳನ್ನು ಆಯ್ದು, ಗಂಟು ಕಟ್ಟಿ ಇನ್ನೊಂದು ಊರಿಗೆ ಹೊರಟುಹೋದನು. ಮೂಲ ಕಥೆ ಇಲ್ಲಿಗೆ ಮುಗಿಯಿತು, ಆದರೆ ಕಥೆಗೆ ಮುಂದೊಂದು ಬಾಲವಿದೆ!

ಹೀಗೆ ಕೆಲವು ಕಾಲ ಕಳೆಯಿತು. ಅಜ್ಜನಿಂದ ಮಗನಿಗೆ, ಮಗನಿಂದ ಮೊಮ್ಮಗನಿಗೆ ಟೊಪ್ಪಿ ಮಾರುವ ವ್ಯಾಪಾರ ಕೈಬದಲಾಯಿತು, ಅದು ಅವರ ಕುಲಕಸುಬಾಗಿತ್ತು. ಹೀಗಿರುವಾಗ ಒಂದು ದಿನ ಆ ಮೊಮ್ಮಗ ಮರದ ಕೆಳಗೆ ಟೊಪ್ಪಿಯ ಗಂಟನ್ನು ಪಕ್ಕದಲ್ಲಿಟ್ಟು ಮಲಗಿದನು. ಒಂದು ಕೋಳಿ ನಿದ್ರೆ (ಸ್ವಲ್ಪ ಸಮಯದ ನಿದ್ರೆ) ಮಾಡಿ ಎದ್ದು ನೋಡಿದಾಗ, ಬುಟ್ಟಿ ಇದೆ ಆದರೆ ಟೊಪ್ಪಿಗಳು ಇಲ್ಲ! ತಕ್ಷಣವೇ ಅವನಿಗೆ ಅಜ್ಜ ಹೇಳಿದ್ದ ಕಥೆ ನೆನಪಾಯಿತು. ಮೇಲಕ್ಕೆ ನೋಡಿದಾಗ ಎಲ್ಲಾ ಕೋತಿಗಳ ತಲೆಯ ಮೇಲೂ ಟೊಪ್ಪಿಗಳಿದ್ದವು.

ಇವನು ತಡ ಮಾಡದೆ, ತಕ್ಷಣ ತನ್ನ ತಲೆಯಲ್ಲಿದ್ದ ಟೊಪ್ಪಿಯನ್ನು ತೆಗೆದು ನೆಲಕ್ಕೆ ಎಸೆದನು. ಅದನ್ನೇ ಕಾಯುತ್ತಿದ್ದಂತೆ ಇದ್ದ ಒಂದು ಸಣ್ಣ ಕೋತಿ ತಬಕ್ಕನೆ ಕೆಳಗೆ ಜಿಗಿದು, ರಪಕ್ಕನೆ ಆ ಟೊಪ್ಪಿಯನ್ನು ಆಯ್ದುಕೊಂಡು, ತನ್ನ ತಲೆಗೆ ಇಟ್ಟುಕೊಂಡು ಮರ ಹತ್ತಿ ಕುಳಿತುಕೊಂಡಿತು! ಏಕೆಂದರೆ ಆ ಕೋತಿಗೆ ಮೊದಲು ಟೊಪ್ಪಿ ಸಿಕ್ಕಿರಲಿಲ್ಲ. "ಛೇ! ಇದೇನಾಯ್ತು?" ಎಂದು ಇವನು ಎರಡು ಕೈಗಳನ್ನು ತಲೆಗೆ ಹಚ್ಚಿಕೊಂಡು ಬೇಸರದಿಂದ ಕುಳಿತನು. ಅಷ್ಟರಲ್ಲಿ ಒಂದು ಮುದುಕ ಕೋತಿ (ಗುರು ಕೋತಿ) ಕೆಳಗೆ ಇಳಿದು ಬಂದು, ಇವನ ಕೆನ್ನೆಗೆ ಬಾರಿಸಿತು! ಮತ್ತು ಹೀಗೆಂದಿತು:

"ಏನೋ, ನಿನಗೆ ಮಾತ್ರವೇ ನಿಮ್ಮ ಅಜ್ಜ ಕಥೆ ಹೇಳಿದ್ದಾ? ನಮಗೆ ಅಜ್ಜಂದಿರು ಇರಲಿಲ್ಲವೇ? ಒಮ್ಮೆ ಮೂರ್ಖರಾದೆವು ಸರಿ, ಮತ್ತೊಮ್ಮೆ ಹಾಗೆಯೇ ಮೂರ್ಖರಾಗಲು ನಾವೇನು ಮನುಷ್ಯರೇ?!"